# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ:08-07-2025

ಸಂಖ್ಯೆ:ಎಸಿ4/01/2025-26

## ಸುತ್ತೋಲೆ

**ವಿಷಯ:-** 2025-26ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿ ಪ್ರವೇಶಾತಿಗಳಿಗೆ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:-** 1) ಸರ್ಕಾರದ ಅಧೀನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು ಅವರ ಪತ್ರ ಸಂಖ್ಯೆ:ಇಡಿ.216.ಯುಎನಿಶಿಇ/2025 ದಿನಾಂಕ 30-6-2025
2) ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ 30-06-2025
3) ವಿಶ್ವವಿದ್ಯಾನಿಲಯದ ಸಮಸಂಖ್ಯೆ ಅಧಿಸೂಚನೆಗಳ ದಿನಾಂಕ 09-04-2025 ಮತ್ತು 22-05-2025
4) ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ ಎಸಿ7(ಎ)/29/2025-26, ದಿನಾಂಕ 25-05-2025
5) ಮಾನ್ಯ ಕುಲಪತಿಗಳ ಆದೇಶ ದಿನಾಂಕ 08-07-2025

******

ಉಲ್ಲೇಖಿತ (3)ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಲ್ಲಿ ಸ್ನಾತಕ ಪದವಿಯ ಪ್ರಥಮ ವರ್ಷದ ಪ್ರವೇಶಾತಿಗೆ ರೂ.500/-ಗಳ ದಂಡ ಶುಲ್ಕದೊಂದಿಗೆ ದಿನಾಂಕ: 10-07-2025ನ್ನು ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿತ್ತು. ಪ್ರಸ್ತುತ, ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನದ ಅನುಸಾರ ದಂಡಶುಲ್ಕರಹಿತವಾಗಿ ದಿನಾಂಕ 30-08-2025ರವರೆಗೂ ಸ್ನಾತಕ ಪದವಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ದಿನಾಂಕವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ವಿಸ್ತರಿಸಲಾಗಿದೆ.

1. ವಿಶ್ವವಿದ್ಯಾನಿಲಯವು ಸರ್ಕಾರದ ನಿರ್ದೇಶಾನುಸಾರ ಉಲ್ಲೇಖ(4)ರಲ್ಲಿ ಹೊರಡಿಸಿರುವ ಸ್ನಾತಕ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ದಿನಾಂಕ ವಿಸ್ತರಣೆಯಾಗಿರುವ ಅವಧಿಯಲ್ಲಿ ಪ್ರವೇಶ ಹೊಂದಿದ ವಿದ್ಯಾರ್ಥಿಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸದೇ Bridge course ಮೂಲಕ ತರಗತಿಗಳನ್ನು ನಡೆಸಿ, ವಿದ್ಯಾರ್ಥಿಗೆ ಪರೀಕ್ಷೆ ತೆಗೆದುಕೊಳ್ಳಲು ಅನುವು ಮಾಡಿಕೊಡತಕ್ಕದ್ದು.
3. ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ Offlineನಲ್ಲಿ ಶುಲ್ಕ ಪಾವತಿಸಿಕೊಂಡು ವಿವರಗಳನ್ನು UUCMS Portalನಲ್ಲಿ Upload ಮಾಡಿ ಪ್ರವೇಶಾತಿ ಅನುಮೋದನೆಗೆ ಸಲ್ಲಿಸುವುದು.
4. ವಿಶ್ವವಿದ್ಯಾನಿಲಯದಿಂದ **ಈಗಾಗಲೇ ಪ್ರವೇಶಾತಿ ಅನುಮೋದನೆಯ ಸಂಬಂಧ ಉಲ್ಲೇಖ(2)ರಲ್ಲಿ ಹೊರಡಿಸಿರುವ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ದಿನಾಂಕಗಳನ್ನು ಕಡ್ಡಾಯವಾಗಿ ಪಾಲಿಸಿ ಪ್ರವೇಶಾತಿ ಅನುಮೋದನೆಗೆ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.** ವಿಸ್ತರಣಾ ದಿನಾಂಕದಲ್ಲಿ ಪ್ರವೇಶಾತಿಗೊಂಡ ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು ತದನಂತರ ಅನುಮೋದನೆಗೆ ಸಲ್ಲಿಸುವುದು.

8.07.07

ಉಪಕುಲಸಚಿವರು(ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-೫೭೦ ೦೦೫

**ಇವರಿಗೆ;**

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮು.ತಿ.ನೊ.

Scanned with OKEN Scanner

3. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- **ಮಾಹಿತಿಗಾಗಿ**
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿಶ್ವವಿದ್ಯಾನಿಲಯ ಕಾನೂನು ಶಾಲೆ, ಮಾನಸಗಂಗೋತ್ರಿ, ಮೈಸೂರು.
6. ನಿರ್ದೇಶಕರು,ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ.,ಮೈಸೂರು- **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.**
8. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, (ಆಡಳಿತ/ಪರೀಕ್ಷಾ/ಶೈಕ್ಷಣಿಕ ವಿಭಾಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಉಪಕುಲಸಚಿವ/ಅಧೀಕ್ಷಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ ಕಟ್ಟಡ, ಮೈವಿವಿ, ಮೈಸೂರು.
10. ಆಡಳಿತ ಶಾಖೆಯ ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು ಇವರ ಆಪ್ತ ಸಹಾಯಕರುಗಳು, ಮೈವಿವಿ, ಮೈಸೂರು.
12. ಕಛೇರಿ ಪ್ರತಿ.

Scanned with OKEN Scanner